# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ

## ಓ ಎಸ್ ನಂ.109/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹಾಲಿಂಗಪ್ಪ ಕೆ ಪಿ | ಡಿ.ಡಬ್ಲ್ಯೂ 02 |
| ತಂದೆಯ ಹೆಸರು | : | ಪಾತಯ್ಯ | |
| ವಯಸ್ಸು | : | ಸು. 58 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸ | : | ಕಾಮಸಮುದ್ರ, ಚಳ್ಳಕೆರೆ ತಾ. | |

ದಿನಾಂಕ 26.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಬಿ ಟಿ ವಕೀಲರಿಂದ

ನನಗೆ ಸಾಕ್ಷ್ಯವನ್ನು ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆ. ಸಮನ್ಸ್ ಪ್ರತಿಯನ್ನು ನಾನು ಈ ದಿವಸ ನ್ಯಾಯಾಲಯಕ್ಕೆ ತಂದಿರುವುದಿಲ್ಲ.

ದಿನಾಂಕ 06.01.2018 ರಂದು 1 ನೇ ಪ್ರತಿವಾದಿ ಈರಮ್ಮ ರವರು ಅವರ ಮಗ ಕಾಟಪ್ಪ ನ ಹೆಸರಿನಲ್ಲಿ ಮರಣ ಶಾಸನವನ್ನು ಮಾಡಿರುತ್ತಾರೆ. ಸದರಿ ದಿವಸವೆ ಆ ದಾಖಲಾತಿ ನೋಂದಣಿ ಆಗಿರುತ್ತದೆ. ಸದರಿ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ. ಸದರಿ ಪತ್ರವನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸದರಿ ಪತ್ರವನ್ನು ಈಗಾಗಲೇ ನಿಡಿ 3 ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ಆತನ ಸಹಿಯನ್ನು ನಿಡಿ 3 ಎ ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ನನ್ನೊಂದಿಗೆ ರಂಗಸ್ವಾಮಿ ರವರು ತಮ್ಮ ಸಹಿಯನ್ನು ಮಾಡಿರುತ್ತಾರೆ. ಸಾಕ್ಷಿ ಗುರುತಿಸಿದ ರಂಗಸ್ವಾಮಿ ರವರ ಸಹಿಯನ್ನು 3 ಬಿ ಎಂದು ಗುರುತಿಸಲಾಯಿತು. ಸದರಿ ಪತ್ರದ ಬರವಣಿಗೆಯನ್ನು ಕೃಷ್ಣಮೂರ್ತಿ ರವರು ಬರೆದಿರುತ್ತಾರೆ. ಸಾಕ್ಷಿ ಗುರುತಿಸಿದ ಕೃಷ್ಣ ಮೂರ್ತಿ ರವರ ಸಹಿಯನ್ನು ನಿಡಿ3 ಸಿ ಎಂದು ಗುರುತಿಸಲಾಯಿತು. ಈರಮ್ಮ ರವರು ಸದರಿ ಪತ್ರಕ್ಕೆ ತಮ್ಮ ಹೆಬ್ಬೆಟ್ಟಿನ ಗುರುತನ್ನು ಪ್ರತಿ ಪುಟಕ್ಕೆ ಹಾಕಿರುತ್ತಾರೆ. ಸದರಿ ಪತ್ರವನ್ನು ಸಾಣಿಕೆರೆ ಗ್ರಾಮದ ಸನಂ.9 ಕ್ಕೆ ಸಂಬಂದಿಸಿದಂತೆ 6 ಗುಂಟೆ ಜಮೀನಿಗಾಗಿ ಮತ್ತು ಸನಂ.85 ಕ್ಕೆ ಸಂಬಂದಿಸಿದಂತೆ 1 ಎಕರೆ ಜಮೀನಿಗಾಗಿ ಮಾಡಲಾಗಿದೆ. ವಿಲ್ ಪತ್ರವನ್ನು ಬರೆಯಲು ಈರಮ್ಮ ರವರೆ ಮಾಹಿತಿಯನ್ನು ನೀಡಿರುತ್ತಾರೆ.

**ಪಾಟೀ ಸವಾಲಿಗೆ ವಾದಿ ಪರ ವಕೀಲರಾದ ಶ್ರೀಮತಿ ನೇತ್ರಾವತಿ ರವರು ಸಮಯ ಕೋರಿದ್ದು ವಾದಿ ಒಂದನೇ ಸಾಕ್ಷಿದಾರರಿಗೆ ಯಾವುದೇ ಪಾಟೀ ಸವಾಲು ಮಾಡದೆ ಇರುವ ಕಾರಣ ಈ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶವನ್ನು ನೀಡಲು ಯಾವುದೇ ಸಮಂಜಸ ಕಾರಣ ಇರುವುದಿಲ್ಲ. ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ